ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ
ವಿಜಯಪುರ

ಮಕ್ಕಳ ಸಾಹಿತ್ಯಕ್ಕೆ ಜಿ.ಪಿ. ರಾಜರತ್ನಂ ಅವರ ಕೊಡುಗೆ.

ಪಿ.ಎಚ್.ಡಿ ನೊಂದಣಿಗಾಗಿ ಸಲ್ಲಿಸುತ್ತಿರುವ ಪ್ರಬಂಧದ ಪೂರ್ವಭಾವಿ ಸಾರಲೇಖ

ಕನ್ನಡ ಅಧ್ಯಯನ ವಿಭಾಗ

ಸಂಶೋಧನಾ ವಿದ್ಯಾರ್ಥಿನಿ

ಶ್ರೀಮತಿ ರಮಜಾನಬಿ ತಹಶೀಲ್ದಾರ

ಮಾರ್ಗದರ್ಶಕರು

ಡಾ॥ ಮಹೇಶ ಚಿಂತಾಮಣಿ

ಪ್ರಾಧ್ಯಾಪಕರು

ಕನ್ನಡ ಅಧ್ಯಯನ ವಿಭಾಗ

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ

ಮಕ್ಕಳ ಸಾಹಿತ್ಯಕ್ಕೆ ಜಿ.ಪಿ. ರಾಜರತ್ನಂ ಅವರ ಕೊಡುಗೆ

ಪರಿವಿಡಿ

ಪ್ರಸ್ತಾವನೆ

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ -1

ಮಕ್ಕಳ ಸಾಹಿತ್ಯದ ಪರಂಪರೆ

1.1 ಆಧುನಿಕ ಪೂರ್ವ ಇತಿಹಾಸ

1.2 ಆಧುನಿಕ ಇತಿಹಾಸ

ಅಧ್ಯಾಯ -2

ರಾಜರತ್ನಂ ಅವರ ವ್ಯಕ್ತಿತ್ವದ ವಿಭಿನ್ನ ನೆಲೆಗಳ ಶೋಧನೆ.

2.1 ಜಿ.ಪಿ. ರಾಜರತ್ನಂ ಅವರ ಜನನ, ಬಾಲ್ಯ, ಪರಿಸರ, ಶಿಕ್ಷಣ ಜಿ.ಪಿ. ಎಂಬ ಅಧ್ಯಕ್ಷರಗಳ ಮೂಲ

2.2 ರಾಜನು ರತ್ನನಾಗಿ ಬದಲಾದ ನಾಮ ಪರಿವರ್ತನೆಯ ಪ್ರಸಂಗ

2.3 ರಾಜರತ್ನಂ ಅವರ ವೈವಾಹಿಕ ಮತ್ತು ಕೌಟುಂಬಿಕ ಜೀವನ

2.4 ರಾಜರತ್ನಂ ಅವರ ಸಾಹಿತ್ಯ ರಚನೆಯ ಪ್ರಭಾವ ಮತ್ತು ಪ್ರೇರಣೆಗಳು

2.5 ರಾಜರತ್ನಂ ಅವರ ವೃತ್ತಿ ಜೀವನ ಮತ್ತು ಸಂಘ-ಸಂಸ್ಥೆಗಳಲ್ಲಿ ಪಾಲಗೊಳ್ಳುವಿಕೆ.

ಅಧ್ಯಾಯ-3

ರಾಜರತ್ನಂ ಅವರ ಮಕ್ಕಳ ಕವಿತೆಗಳು ಮತ್ತು ಶಿಶುಪ್ರಾಸಗಳು

3.1 ಕವಿತೆಗಳ ವಸ್ತು, ಭಾಷೆ, ಶೈಲಿ, ತಂತ್ರ ಹಾಗೂ ವೈವಿಧ್ಯತೆ

3.2 ಕವಿತೆಗಳ ಮಾನವೀಯ ಮೌಲ್ಯಗಳ ಹುಡುಕಾಟ

ಅಧ್ಯಾಯ-4

ರಾಜರತ್ನಂ ಅವರ ಮಕ್ಕಳ ಸಣ್ಣ ಕಥೆಗಳು

4.1 ರಾಜರತ್ನಂ ಅವರ ಸಣ್ಣ ಕಥೆಗಳು ವಿಭಿನ್ನ ನೆಲೆಗಳು

4.2 ಪೌರಾಣಿಕ- ಐತಿಹಾಸಿಕ ಕಥೆಗಳು

4.3 ದೇಶ- ವಿದೇಶಗಳ ಕಥೆಗಳು

4.4 ಬೌದ್ಧ ಕಥೆಗಳು

ಅಧ್ಯಾಯ -5

ರಾಜರತ್ನಂ ಅವರ ಮಕ್ಕಳ ನಾಟಕಗಳು

5.1 ರಾಜರತ್ನಂ ಅವರ ಮಕ್ಕಳ ಜೀವನ ಚರಿತ್ರೆಗಳು

5.2 ರಾಜರತ್ನಂ ಅವರ ಜೀವನ ಚರಿತ್ರೆಗಳ ಮೌಲ್ಯ ಪ್ರಜ್ಞೆ

ಸಮಾರೋಪ

ಪ್ರಸ್ತಾವನೆ:-

ಆಧುನಿಕ ಕನ್ನಡ ಸಾಹಿತ್ಯ ಪರಂಪರೆಯು ಹಲವು ಸಾಹಿತ್ಯ ಚಳುವಳಿಗಳ ಅಂದರೆ ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯಗಳ ಮೂಲಕ ಬೆಳೆದು ಬಂದಿದೆ ಆದರೆ ಇದಾವುದರ ಪರಿವೆಯಿಲ್ಲದೆ ಕನ್ನಡದಲ್ಲಿ ಬೆಳೆದ ಮಕ್ಕಳ ಸಾಹಿತ್ಯ ಅದಕ್ಕೆ ಸಮಾನಾಂತರವಾಗಿ ಅಂದಂದಿನ ಅಗತ್ಯಗಳಿಗನುಗುಣವಾಗಿ ರೂಪಗೊಳ್ಳುತ್ತ ಬಂದಿದೆ.

ಮಕ್ಕಳ ಸಾಹಿತ್ಯ ಸಮೃದ್ಧವಾಗಿ ಕನ್ನಡದಲ್ಲಿ ಲಭ್ಯವಿದ್ದರೂ ಈ ಸಾಹಿತ್ಯವನ್ನು ಕುರಿತು ಆಳವಾದ ವಿಮರ್ಶೆ, ಸಂಶೋಧನೆಗಳು, ನಡೆದುದು ವಿರಳವೆಂದೇ ಹೇಳಬೇಕು. ಈ ಕುರಿತು ಸಂಶೋಧನೆಗಳಿಗೆ ಅನೇಕ ಅವಕಾಶಗಳಿವೆ. ಸಿಸು ಸಂಗಮೇಶ ಈಶ್ವರಚಂದ್ರ ಚಿಂತಾಮಣಿ, ಈಶ್ವರ ಕಮ್ಮಾರ, ಶಂ.ಗು, ಬಿರಾದಾರ, ಇಂತಹ ಮಕ್ಕಳ ಸಾಹಿತಿಗಳನ್ನು ಕುರಿತು ನಡೆದ ಪಿ.ಎಚ್.ಡಿ ಅಧ್ಯಯನಗಳು ಈ ದಿಸೆಯಲ್ಲಿ ಒಳ್ಳೆಯ ಪ್ರಯತ್ನಗಳೆನಿಸಿವೆ.

ಈ ನಿಟ್ಟಿನಲ್ಲಿ 'ಕನ್ನಡ ರತ್ನ' ಎಂದೇ ಖ್ಯಾತಿ ಪಡೆದ 'ಮಕ್ಕಳ ಕವಿ' ರಾಜರತ್ನಂ ಅವರು ಮಕ್ಕಳ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪಾರ ಹಾಗೂ ಅನ್ಯನ್ಯವಾದುದು. ರಾಜರತ್ನಂ ಅವರಿಗೆ ಮಕ್ಕಳ ಮನೋವಿಕಾಸದ ಬಗ್ಗೆ ಇದ್ದ ಕಾಳಜಿ, ಮತ್ತು ಒಬ್ಬ ಬಾಲಮನೋವಿಜ್ಞಾನಿಯಂತೆ ಅಕ್ಕರೆಯ ತಾಯಿಯಂತೆ ಬಾಲ ಮನಸ್ಸನ್ನು ಹೊಕ್ಕಿರುವ ಜಿ.ಪಿ ರಾಜರತ್ನಂ ಅವರು ಮಕ್ಕಳ ಸಾಹಿತ್ಯಕ್ಕೆ ನೀಡಿದ ಕೊಡುಗೆಯನ್ನು ಪರಾಮರ್ಶನ ಮಾಡುವ ಉದ್ದೇಶದಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಈ ಮಹಾ ಪ್ರಬಂಧವು ಒಟ್ಟು ಐದು ಅಧ್ಯಾಯಗಳಲ್ಲಿ ಅಧ್ಯಯನ ಮಾಡಲಾಗುವುದು.

ಉದ್ದೇಶ:-

ಮಕ್ಕಳ ಸಾಹಿತ್ಯ ತೋಟದಲ್ಲಿ ರಾಜರತ್ನಂ ಅವರು ಮುಟ್ಟದ ಗಿಡವಿಲ್ಲ ಕಥೆ ಕವನ , ಚುಟುಕ, ನಾಟಕ, ನಿಳ್ಗವನ, ಜೀವನ ಚರಿತ್ರೆ ಪುರಾಣ- ಐತಿಹಾಸಿಕ, ದೇಶ ವಿದೇಶಗಳ ಕಥೆಗಳು, ಕಾದಂಬರಿಯೊಂದನ್ನು ಹೊರತುಪಡಿಸಿ ಎಲ್ಲದರಲ್ಲೂ ಕೃಷಿ ಮಾಡಿದ್ದಾರೆ.

ಈದಿಸೆಯಲ್ಲಿ ರಾಜರತ್ನಂರವರ ಮಕ್ಕಳ ಸಾಹಿತ್ಯ ಕೃತಿಗಳನ್ನು ಕುರಿತು ವ್ಯಾಪಕವಾದ ಮತ್ತು ತಲಸ್ಪರ್ಶಿಯಾದ ಅಧ್ಯಯನ ಇದುವರೆಗೆ ನಡೆಯದೇ ಇರುವುದನ್ನು ಅನುಲಕ್ಷಿಸಿ ಆ ಕೊರತೆಯನ್ನು ತುಂಬುವ ಪ್ರಯತ್ನವಾಗಿ ಈ ಅಧ್ಯಯನವನ್ನು ಕೈಗೊಂಡಿರುವುದಾಗಿ ಉದ್ದೇಶವನ್ನು ಸ್ಪಷ್ಟಪಡಿಸಲಾಗಿದೆ

ಅಧ್ಯಯನದ ವ್ಯಾಪ್ತಿ:

ಒಟ್ಟಾರೆಯಾಗಿ 'ಮಕ್ಕಳ ಸಾಹಿತ್ಯಕ್ಕೆ ಜಿ.ಪಿ. ರಾಜರತ್ನಂ ಅವರ ಕೊಡುಗೆ' ಎಂಬ ಶೀರ್ಷಿಕೆಯ ಅಡಿಯಲ್ಲಿ ಅವರು ರಚಿಸಿದ ಮಕ್ಕಳ ಸಾಹಿತ್ಯ ಕುರಿತು ತಲಸ್ಪರ್ಶಿ ಹಾಗೂ ಸಮೀಕ್ಷೆ ರೂಪದ ಅಧ್ಯಯನ ಮಾಡುವುದು ಪ್ರಸ್ತುತ ಅಧ್ಯಯನದ ವ್ಯಾಪ್ತಿಯಾಗಿದೆ.

ಅಧ್ಯಾಯ -1 ಮಕ್ಕಳ ಸಾಹಿತ್ಯದ ಪರಂಪರೆ

ಈ ಅಧ್ಯಾಯದಲ್ಲಿ ಮಕ್ಕಳ ಸಾಹಿತ್ಯದ ಅರ್ಥ, ಸ್ವರೂಪ, ಮತ್ತು ಮಕ್ಕಳ ಸಾಹಿತ್ಯವನ್ನು ಕುರಿತ ವ್ಯಾಖ್ಯಾನಗಳು, ಹಾಗೂ ಆಧುನಿಕ ಪೂರ್ವ ಇತಿಹಾಸ ಮತ್ತು ಆಧುನಿಕ ಇತಿಹಾಸವನ್ನು ಅಧ್ಯಯನ ಮಾಡಲಾಗುವುದು. ಹಾಗೆಯೇ ಮಕ್ಕಳ ಸಾಹಿತ್ಯವು ಪ್ರಪಂಚದಲ್ಲಿ ಹಾಗೂ ಭಾರತದಲ್ಲಿ ಯಾವ ರೀತಿಯಾಗಿ ಬೆಳೆದು ಬಂದಿದೆ, ಎಂಬುದನ್ನು ಈ ರೀತಿಯಾಗಿ ಚರ್ಚಿಸಲಾಗುವುದು. ಕಂಠಸ್ಥ ರೂಪದಲ್ಲಿ, ಗ್ರಂಥಸ್ಥ ರೂಪದಲ್ಲಿ ಹಳೆಗನ್ನಡ, ನಡುಗನ್ನಡ, ಹಾಗೂ ಹೊಸಗನ್ನಡದಲ್ಲಿ ಮಕ್ಕಳ ಸಾಹಿತ್ಯ ಬೆಳೆದು ಬಂದಿದೆ. ಹಾಗೆಯೇ ಹೊಸಗನ್ನಡದಲ್ಲಿ ಸೃಷ್ಠಿಯಾದ ಮಕ್ಕಳ ಸಾಹಿತ್ಯವನ್ನು 3 ಘಟ್ಟಗಳನ್ನಾಗಿ ವಿಂಗಡಿಸಲಾಗಿದೆ.

1) ಪ್ರಥಮಘಟ್ಟ - 1850-1947 ವರೆಗೆ
2) ದ್ವಿತೀಯ ಘಟ್ಟ - 1947-1970 ವರೆಗೆ
3) ತೃತೀಯ ಘಟ್ಟ - 1970- ಇತ್ತೀಚಿನವರೆಗೆ

ಈ ರೀತಿಯಾಗಿ ವಿಭಾಗ ಮಾಡಿಕೊಂಡು ಆಯಾ ಕಾಲಘಟ್ಟದಲ್ಲಿ ಬರುವಂತಹ ಪ್ರಮುಖ ಮಕ್ಕಳ ರಚನಾಕಾರರು ಮಕ್ಕಳ ಸಾಹಿತ್ಯಕ್ಕೆ ನೀಡಿದ ಕೊಡುಗೆಯನ್ನು ಕುರಿತು ಅಧ್ಯಯನ ಮಾಡಲಾಗುವುದು. ಸಾಮಾನ್ಯವಾಗಿ ಮಕ್ಕಳ ಸಾಹಿತ್ಯ ಎಂದರೇನು? ಎಂಬ ಪ್ರಶ್ನೆ ಉದ್ಭವಿಸಿದಾಗ 'ಶಿಶುವಿಹಾರದಿಂದ ಹಿಡಿದು ಪ್ರೌಢಶಾಲೆಯ ಹಂತದವರೆಗಿನ ಕಿರಿಯರಿಗಾಗಿ ರಚಿಸಲ್ಪಟ್ಟ ಸರಳ ಹಾಗೂ ಸುಲಭ ಸಾಹಿತ್ಯಕ್ಕೆ ಮಕ್ಕಳ ಸಾಹಿತ್ಯ ಎಂದು ಕರೆಯಲಾಗಿದೆ. ಮಕ್ಕಳ ಸಾಹಿತ್ಯ ಬೆಳೆಯುತ್ತಿದ್ದಂತೆಯೇ ಮಕ್ಕಳು ಎಂದರೆ ಯಾರು? ಯಾವ ವಯೋಮಾನದವರನ್ನು ಮಕ್ಕಳೆನ್ನಬೇಕು, ಎನ್ನುವ ಚರ್ಚೆಗಳು ನಡೆದಾಗ ಮಕ್ಕಳ ಮನಸ್ಸಿನಾಧಾರದಿಂದ ಮತ್ತು ಅವರ ವಯೋಮಾನದಿಂದ ಮೂರು ಘಟ್ಟಗಳನ್ನಾಗಿ ವಿಂಗಡಿಸಲಾಗಿದೆ.

1) 3ರಿಂದ6 ವರ್ಷದ ಮಕ್ಕಳಿಗಾಗಿ 'ಶಿಶುಸಾಹಿತ್ಯ'
2) 6 ರಿಂದ 9 ವರ್ಷದ ಮಕ್ಕಳಿಗಾಗಿ 'ಬಾಲ ಸಾಹಿತ್ಯ'
3) 3ರಿಂದ 14 ವರ್ಷದ ಮಕ್ಕಳಿಗಾಗಿ ರಚಿತವಾದ ಸಾಹಿತ್ಯವನ್ನು 'ಮಕ್ಕಳ ಸಾಹಿತ್ಯ' ಎಂದು ಕರೆಯುತ್ತೇವೆ.

ಈ ಎಲ್ಲ ಸಂಗತಿಗಳನ್ನು ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಪರಂಪರೆ ಎಂಬ ಅಧ್ಯಾಯದಲ್ಲಿ ಅಧ್ಯಯನ ಮಾಡಲಾಗುವುದು..

ಅಧ್ಯಾಯ 02 : ಡಾ|| ಜಿ.ಪಿ. ರಾಜರತ್ನಂ ಅವರ ಜೀವನ ಮತ್ತು ವ್ಯಕ್ತಿತ್ವದ ನೆಲೆಗಳು

ಈ ಸಂಶೋಧನೆ ಮಹಾಪ್ರಬಂಧದ ಎರಡನೆಯ ಅಧ್ಯಾಯ. ಇದರಲ್ಲಿ ರಾಜರತ್ನಂ ಅವರ ಸಮಗ್ರವಾದ ಜೀವನ ಚರಿತ್ರೆಯನ್ನು ನಿರೂಪಿಸಲಾಗುದು. ಶಿಶು ಸಾಹಿತ್ಯದ ಅಗ್ರಗಣ್ಯ

ಜಿ.ಪಿ.ರಾಜರತ್ನಂ ಅವರು ಹುಟ್ಟಿದ್ದು ಡಿಸೆಂಬರ 5 1908ನೆಯ ಇಸವಿ ಅಂದು ಕಾರ್ತಿಕ ಪೂರ್ಣಿಮೆ ಶ್ರೀವೈಷ್ಣವರಿಗೆ ಆನೆಯ ಹಬ್ಬ ಎಂದೇ ಪ್ರಖ್ಯಾತಿ. ಇವರು ಹುಟ್ಟಿದ್ದು ಅಂದಿನ ಕ್ಲೋಸಪೇಟೆ ಅಂದರೆ ಈಗಿನ ರಾಮನಗರ ಜಿಲ್ಲೆ.

ಇವರದು ಪಂಡಿತರ ವಂಶ ಇವರ ಪೂರ್ಣ ಹೆಸರು- ಗುಂಡ್ಲುಪಂಡಿತ ರಾಜರತ್ನಂ ಅಯ್ಯಂಗಾರ ತಂದೆ – ಗೋಪಾಲಕೃಷ್ಣ ಅಯ್ಯಂಗಾರ ಇವರ ತಾಯಿ ಪ್ರೀತಿಯಿಂದ 'ರಾಜಾ' ಎಂದು ಕರೆಯುತ್ತಿದ್ದರು. ವಿಧಿವಶಾತ ಮೂರು -ನಾಲ್ಕು ವರ್ಷದ ಮಗುವಾಗಿದ್ದಾಗಲೇ ಅವರ ತಾಯಿ ತೀರಿಕೊಂಡರು. ಅಜ್ಜಿಯ ಅಕ್ಕರೆಯಲ್ಲಿ ತಮ್ಮ ಬಾಲ್ಯವನ್ನು ಕಳೆದರು ಇವರದು ಪಂಡಿತವಂಶವಾದರೂ ಇವರು ಬದುಕು ಸಾಗಿಸಿದ್ದು ಕಷ್ಟಗಳ ಕಲ್ಲು ಹಾದಿಯಲ್ಲಿಯೆ !

ಸಾಹಿತ್ಯ ಸೃಷ್ಠಿಕರ್ತರಾಗಿ, ಸಾಹಿತ್ಯ ಪ್ರಚಾರಕರಾಗಿ ಶ್ರೇಷ್ಠ ಗುರುವಾಗಿ ವಾಗ್ಮಿಯಾಗಿ ಜೀವನದಲ್ಲಿ ಸದಾ ಉನ್ನತ ಆದರ್ಶಗಳನ್ನುಟ್ಟುಕೊಂಡು ಸಮ್ಯಕ್ ಜ್ಞಾನ, ಸಮ್ಯಕ್ ದರ್ಶನ್ ಸಮ್ಯಕ್ ಚಾರಿತ್ಯಗಳನ್ನು ತಮ್ಮಲ್ಲಿ ರೂಡಿಸಿಕೊಂಡು ಉತ್ತಮ ಬದುಕನ್ನು ಕಟ್ಟಿಕೊಂಡಿದ್ದರು. ಅವರ ಬದುಕಿನ ಪ್ರಧಾನ ಗುಣಗಳೆಂದರೆ ಸರಳತನ ಹಾಗೂ ಸ್ವಚ್ಚತನ.

ಪ್ರಾಥಮಿಕ ಶಿಕ್ಷಣವನ್ನು ಕ್ಲೂಸ್‌ಪೇಟೆಯಲ್ಲಿ ತಂದೆಯವರು ಹೇಳಿಕೊಡುತ್ತಿದ್ದ ಶಾಲೆಯಲ್ಲಿ ಶಿಕ್ಷಣವನ್ನು ಮುಗಿಸಿದರು. ನಂತರ ಬಿ.ಎ. ಪದವಿಯನ್ನು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಮುಗಿಸಿದರು.

1931 ರಲ್ಲಿ ಕನ್ನಡ ಸ್ನಾತಕೊತ್ತರ ಪದವಿಯನ್ನು ಮೈಸೂರು ಮಹಾರಾಜ ಕಾಲೇಜಿನಲ್ಲಿ ಪಡೆದರು. ಎಂ.ಎ. ವಿದ್ಯಾರ್ಥಿಯಾಗಿದ್ದಾಗಲೇ 'ಬೆಳೆಯುವ ಪೈರು ಮೊಳಕೆಯಲ್ಲಿಯೇ ಕಂಡಂತೆ ಪಾರಿವಾಳದ ಕುರಿತು "ತಾರೆ" ಎಂಬ ನೀಳ್ಗವನವನ್ನು ರಚಿಸಿ ಬಿ.ಎಂ.ಶ್ರೀ.ಯವರು ಇಟ್ಟಿದ್ದ ಸ್ವರ್ಣಫಲಕವನ್ನು ಗೆದ್ದುಕೊಂಡರು.

ಸ್ನಾತಕೋತ್ತರ ಪದವಿಯನ್ನು ಪೂರೈಯಿಸಿದ ನಂತರ ಸುಮಾರು 10 ವರ್ಷಗಳವರೆಗೆ ನಿರುದ್ಯೋಗಿಯಾಗಿದ್ದರು. ಜೀವನದಲ್ಲಿ ಪಡಬಾರದ ಕಷ್ಟ ಪಟ್ಟರು ಇವರಿಗೆ ದುಡ್ಡಿಗೆ ಬಡತನ ವಿತ್ತು ಆದರೆ ವಿದ್ಯೆ-ಪಾಂಡಿತ್ಯಕ್ಕೆ ಬಡತನ ಇರಲಿಲ್ಲ.

ರಾಜರತ್ನಂ ಅವರ ವೈವಾಹಿಕ ಮತ್ತು ಕೌಟುಂಬಿಕ ಜೀವನ ಅಷ್ಟೊಂದು ಸುಖಕರವಾಗಿರಲಿಲ್ಲ. ಯಾಕೆಂದರೆ ರಾಜರತ್ನಂ ಅವರು ಕೇವಲ 20 ನೇ ವಯಸ್ಸಿನಲ್ಲಿಯೇ ಲಲಿತಮ್ಮ ಎನ್ನುವರನ್ನು ವಿವಾಹವಾದರು. ಲಲಿತಮ್ಮ ರಾಜರತ್ನಂ ಅವರ ಮನ ತುಂಬಿದರು, ಆದರೆ ಮನೆ ತುಂಬಲಿಲ್ಲ ಎಳೆ ಹರೆಯದಲ್ಲೇ ಮದುವೆ ಆಗಿ ಆರು ವರ್ಷದಲ್ಲೇ ಕ್ಷಯರೋಗಕ್ಕೆ ಲಲಿತಮ್ಮ ಬಲಿಯಾದರು. ಆ ಒಂದು ನೋವಿನಲ್ಲಯೇ ರಾಜರತ್ನಂ ಅವರ ಅಮರ ಕೃತಿ "ರತ್ನನ ಪದಗಳು" ಅಲ್ಲಿ ಬರುವ ರತ್ನ-ಮತ್ತು ಪುಟ್ನಂಜಿಯವರ ಚಿತ್ರಣಕ್ಕೆ ಅವರ ದಾಂಪತ್ಯದ ಧಾರುಣ ಅನುಭವವೇ ಹಿನ್ನಲೆಯಾಗಿ ಶೋಕ-ಶ್ಲೋಕವಾಗಿ ಹೊಮ್ಮಿ ಬಂದಿತು.

ರಾಜರತ್ನಂರವರು ಎದೆಗುಂದಲಿಲ್ಲ ಎರಡನೇ ಮದುವೆ ಸೀತಮ್ಮನವರ ಜೊತೆ ಆಯಿತು. ಇವರಿಗೆ ಇಬ್ಬರು ಹೆಣ್ಣು ಮಕ್ಕಳು ಒಬ್ಬಗಂಡು ಮಗ ಇದ್ದರು. ಮಕ್ಕಳ ಹೆಸರು ಶ್ರೀಮತಿ, ಶ್ರೀಲತಾ,ಶ್ರೀಧರ, ಅಳಿಯ - ಶ್ರೀ ಸಂಪತ್ತಕುಮಾರ ಹೀಗೆ ಅವರ ಕೌಟುಂಬಿಕ ಜೀವನ ಇತ್ತು.

ರಾಜರತ್ನಂರವರು ಬರಿ ಸಾಹಿತಿಯಾಗಿರದೇ ಒಬ್ಬ ಸಾಹಿತ್ಯ ಪರಿಚಾರಕರಾಗಿ ಯುವ ಬರಹಗಾರರಿಗೆ ಮಾರ್ಗದರ್ಶಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಹಾಗೆಯೇ ಮಕ್ಕಳ ಸಾಹಿತ್ಯ ಸಂಘಟನೆಗಳಿಗೆ ಸಂಬಂಧಿಸಿದಂತೆ ಅನೇಕ ಮಕ್ಕಳ ಸಾಹಿತ್ಯ ವೇದಿಕೆಯೊಂದನ್ನು ಸ್ಥಾಪಿಸಿ ಅಲ್ಲಿ ಮಕ್ಕಳ ಅಭ್ಯುದಯಕ್ಕೆ ಶ್ರಮಿಸಿದ್ದಾರೆ. ಇವರ ನಿರಂತರ ಸಾಹಿತ್ಯ ಸೇವೆಯನ್ನು ಗಮನಿಸಿ ಇವರಿಗೆ 'ರಾವ್‌ಬಹದ್ದೂರ ಪ್ರಶಸ್ತಿ' ಲಭಿಸಿದೆ. ಹಾಗೆಯೇ ಇವರು ಅನೇಕ ಮಕ್ಕಳ ಸಾಹಿತ್ಯಗೋಷ್ಠಿ, ವಿಚಾರ ಸಂಕಿರಣ, ಕಮ್ಮಟಗಳಲ್ಲಿ, ಉಪನ್ಯಾಸಕರಾಗಿ ಸಂವಾದಕರಾಗಿ ಭಾಗವಹಿಸಿದ ಶ್ರೇಯಸ್ಸು ಇವರದು ಹಾಗೆಯೇ ಕವಿಗಳ ಸಂಘಟನಾ ಕಾರ್ಯದಲ್ಲಿ ತೊಡಗುವದು ಇವರ ವ್ಯಕ್ತಿತ್ವದ ವಿಶೇಷತೆ ಇವರ ಅನೇಕ ಕವಿತೆಗಳು ಪ್ರಾಥಮಿಕ ಪಠ್ಯ ಪುಸ್ತಕಗಳಲ್ಲಿ ಪಠ್ಯಗಳಾಗಿ ಜನಪ್ರಿಯಗೊಂಡಿವೆ.

ಇವರ ಜೀವನ ಚರಿತ್ರೆಯನ್ನು ಸಾಧ್ಯವಾದಷ್ಟು ಸಮಗ್ರತೆಯನ್ನು ತರುವ ಹಾಗೂ ಸಂಪೂರ್ಣ ವ್ಯಕ್ತಿ ಚಿತ್ರಣವನ್ನು ಈ ಅಧ್ಯಯನದಲ್ಲಿ ಕೈಗೊಳ್ಳಲಾಗುವುದು.

ಅಧ್ಯಾಯ:3 ರಾಜರತ್ನಂ ಅವರ ಮಕ್ಕಳ ಕವಿತೆಗಳು ಮತ್ತು ಶಿಶುಪ್ರಾಸಗಳು.

'ಬಣ್ಣದ ತಗಡಿನ ತುತ್ತೂರಿ' ಪದ್ಯವನ್ನು ಕಲಿಯದ, ಕಲಿತು ನಲಿಯದ ಕನ್ನಡದ ಶಾಲಾ ಮಕ್ಕಳಿಲ್ಲ, ಗುಂಡ್ಲುಪೇಟೆಯ ರಾಜರತ್ನಂ ಅವರ ಶಿಶು ಸಾಹಿತ್ಯ ಅಂದರೆ 3-4 ನೆಯ ವಯಸ್ಸಿನ ಕಂದಮ್ಮಗಳಿಂದ ಹಿಡಿದು ಇಂದಿನ ಏಳನೆಯ ತರಗತಿಯವರೆಗಿನ ಮಕ್ಕಳನ್ನು ಗಮನದಲ್ಲಿಟ್ಟುಕೊಂಡು ರಚಿಸಿದ್ದಾರೆ. ಮಕ್ಕಳಿಗೆ ತಿಳಿಯುವಂತೆ ಸರಳ ಹಾಗೂ ಸುಲಭ ಭಾಷೆಯಲ್ಲಿ ರಚಿಸಿದ್ದಾರೆ ಇವರು ಪದ್ಯಗಳಲ್ಲಿ ಬಳಸಿಕೊಂಡ ವಸ್ತು, ಶೈಲಿ, ತಂತ್ರ, ಹಾಗೂ ಮಾನವೀಯ ಮೌಲ್ಯಗಳು ಅಪಾರವಾದದ್ದು ಇವರ ಪದ್ಯಗಳನ್ನು ಈ ರೀತಿಯಾಗಿ ವಿಂಗಡಿಸಿದ್ದೇನೆ.

1) ಅಂಕಿಸಂಖ್ಯೆಯ ಮಗ್ಗಿಯ ಪದ್ಯಗಳು 2) ಸಂಧ್ಯಕ್ಷರಗಳನ್ನು ಕಲಿಸುವ ಪದ್ಯಗಳು 3) ಪ್ರಾಣಿ-ಪಕ್ಷಿಗಳ ಪದ್ಯಗಳು. 4) ಪ್ರಕೃತಿ ವರ್ಣನೆಯ ಪದ್ಯಗಳು 5) ಮಾತೃಭಾಷೆಯ ಪದ್ಯಗಳು 6) ಹಳ್ಳಿಯ ಸೊಬಗಿನ ಪದ್ಯಗಳು 7) ಹಾಸ್ಯಮಯ ಪದ್ಯಗಳು 8) ಪುರಾಣದ ಪದ್ಯಗಳು 9)ನೀತಿ-ಬೋಧನೆಯ ಪದ್ಯಗಳು 10)ತಾರೆ- ನಿಳ್ಳವನ 11) ಇತರೆ ಪದ್ಯಗಳು.

- ತುಂಟ ಗಣಪತಿ ಮತ್ತು ಮುದ್ದು ಕೃಷ್ಣ:-

ಈ ಎರಡು ಕೃತಿಗಳನ್ನು ಪ್ರತ್ಯೇಕವಾಗಿ ರಚಿಸಿದ್ದಾರೆ. ಈ ಕೃತಿಗಳನ್ನು ಮೊದಲು ಸಂಸ್ಕೃತದ 'ಲೀಲಾಶುಕ' ಎಂಬಕವಿ ಬರೆದನು. ಈತನ ಕಾವ್ಯದ ಹೆಸರು -ಶ್ರೀ ಕೃಷ್ಣಕರ್ಣಾಮೃತ' ಇದರಿಂದ 5 ನೇ ಭಾಗವನ್ನು ಮಾತ್ರ ಆಯ್ದುಕೊಂಡು ಅವುಗಳನ್ನು ಮಕ್ಕಳಿಗೆ ಕತೆ ಹೇಳುವ ಹಾಗೆ ಬೆಳೆಸಿ ರಚನೆ ಮಾಡಿ ಕನ್ನಡದಲ್ಲಿ ವಿವರಿಸಿದ್ದಾರೆ, ಇದರಲ್ಲಿ ಕೃಷ್ಣನನ್ನು ಕುರಿತ ನೂರಾರು

ಪದ್ಯಗಳಿವೆ. ಹಾಗೆಯೇ ಕೃಷ್ಣನ ರೂಪ ,ಗುಣ, ತುಂಟಾಟಗಳನ್ನು ಚಿತ್ರಿಸಲಾಗಿದೆ. ಮತ್ತು ಪ್ರಾರ್ಥನಾ ಪದ್ಯಗಳು, ಕಿರ್ತನೆಗಳನ್ನು ರಚಿಸಿದ್ದಾರೆ. ಇತ್ಯಾದಿ ವಿಷಯಯವನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗುವುದು.

ಅಧ್ಯಾಯ-4 ರಾಜರತ್ನಂ ಅವರ ಮಕ್ಕಳ ಸಣ್ಣ ಕಥೆಗಳು:-

ಮಕ್ಕಳ 'ಕಥಾ' ಸಾಹಿತ್ಯದಲ್ಲಂತೂ ಅವರದು ಅಗ್ರಗಣ್ಯ ಹೆಸರು. ರಾಜರತ್ನಂ ಅವರ ಕಥಾ ಸಾಹಿತ್ಯದಲ್ಲಿ ಪದ್ಯಕ್ಕಿಂತ ಗದ್ಯವೇ ಸಿಂಹಪಾಲು ಪಡೆಯುತ್ತದೆ. ಅವರಷ್ಟು ಮಕ್ಕಳಿಗಾಗಿ ಕಥೆಗಳನ್ನು ಬರೆದವರು ಕನ್ನಡದಲ್ಲಿ ಇನ್ನೊಬ್ಬರಿಲ್ಲ ಕಥಾ ತಂತ್ರದಲ್ಲಿ ಅವರದು ನವೀನ ರೀತಿ ಬರೀ ಮನೋರಂಜನೆಗಾಗಿ ಸಮಯ ಕಳೆಯುವುದಕ್ಕಾಗಿ ಅವರೆಂದೂ ಕತೆಗಳನ್ನು ರಚಿಸಲಿಲ್ಲ.

ಮಕ್ಕಳಲ್ಲಿ ವೈಚಾರಿಕ ಪ್ರಜ್ಞೆ, ವೈಜ್ಞಾನಿಕ ಮನೋಭಾವ, ಮೂಡಿಸುವ ದೃಷ್ಠಿಯಿಂದ ಮಕ್ಕಳ ಭಾವನೆಗಳಿಗೆ ಅವರ ಸಮಕಾಲಿನ ಸಂವೇದನೆಗಳಿಗೆ ಸ್ಪಂಧಿಸುವಂತಹ ಕಥೆಗಳನ್ನು ರಚಿಸಿದಲ್ಲದೆ. ಮಕ್ಕಳ ಮನೋಭೂಮಿಕೆಯಲ್ಲಿ ನೀತಿಯ ಬೀಜವನ್ನು ಬಿತ್ತಿ ಅವರನ್ನು ಸುಶೀಲರನ್ನಾಗಿ ಸದ್ಗುಣಿಗಳನ್ನಾಗಿ ಮಾಡುವಂತಹ ಕಥೆಗಳನ್ನು ರಚಿಸಿದ್ದಾರೆ.

ಇವರು ಹೆಚ್ಚಾಗಿ ಅನುವಾದ ಕಥೆಗಳನ್ನು ರಚಿಸಿದ್ದಾರೆ, ಇವರು ಒಟ್ಟು 52 ಕತೆಗಳನ್ನು ಬರೆದಿದ್ದಾರೆ. ಅಷ್ಟೇ ಅಲ್ಲದೇ ಅನ್ಯದೇಶಗಳ ಜನಾಂಗಗಳ ಸಂಸ್ಕೃತಿ, ನೆಲ-ಜಲ, ಆಹಾರ-ವಿಹಾರ, ಉಡುಗೆ-ತೊಡುಗೆ ಬದುಕಿನ ರೀತಿ-ನೀತಿಗಳನ್ನು ತಿಳಿಸುವ, ಹಾಗೂ ಅನ್ಯ ಸಂಸ್ಕೃತಿ ಧರ್ಮವನ್ನು ಪ್ರೀತಿಸುವ ಗೌರವಿಸುವಂತಹ ಮನೋಭಾವ ಬೆಳೆಸುವ ಕಥೆಗಳನ್ನು ಸೃಷ್ಠಿಸಿದರು. ಹಾಗೆಯೇ ಬೇರೆ-ಬೇರೆ ದೇಶದ ಕಥೆಗಳನ್ನು ಕನ್ನಡಕ್ಕೆ ತಂದು ಅಲ್ಲಿಯ ಸಾಹಸ ಧೈರ್ಯವನ್ನು ಪರಿಚಯಿಸಿದರು. ನಾನು ನನ್ನ ಅಧ್ಯಯನದ ದೃಷ್ಟಿಯಿಂದ ರಾಜರತ್ನಂ ಅವರ ಎಲ್ಲಾ ಕಥೆಗಳನ್ನು ಒಂದು ಪಕ್ಷಿನೋಟದಲ್ಲಿ ಈ ರೀತಿಯಾಗಿ ವಿಂಗಡಿಸಲಾಗುವುದು.

1) ಪೌರಾಣಿಕ ಕಥೆಗಳು
2) ಐತಿಹಾಸಿಕ ಕಥೆಗಳು
3) ಅದ್ಭುತ-ರಮ್ಯ ಸಾಹಸದ ಕಥೆಗಳು
4) ವೈಜ್ಞಾನಿಕ ಕಥೆಗಳು
5) ಚಿತ್ರಕಥೆ (ಕಾಮಿಕ್ಸ್) ಕಥೆಗಳು
6) ಪಶು-ಪಕ್ಷಿಗಳ ಕಥೆಗಳು
7) ದೇಶ-ವಿಧೇಶದ ಕಥೆಗಳು
8) ಬೌದ್ಧ ಕಥೆಗಳು
9) ಹಾಸ್ಯಮಯ ಕೆಥೆಗಳು
10) ಇತರೆ ಕಥೆಗಳು

ಹಾಗೆಯೇ ಮಕ್ಕಳಿಗಾಗಿ ಪ್ರಾಕೃತ, ಸಂಸ್ಕೃತ,ಪಾಲಿ, ಪರ್ಷಿಯನ್, ಭಾಷೆಯಲ್ಲಿರುವ ಕಥೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಇತ್ಯಾದಿ ವಿಷಯವನ್ನು ಈ ಅಧ್ಯಾಯನದಲ್ಲಿ ಚರ್ಚಿಸಲಾಗುವುದು.

ಅಧ್ಯಾಯ-5: ರಾಜರತ್ನಂ ಅವರ ಮಕ್ಕಳ ನಾಟಕಗಳು ಮತ್ತು ಜೀವನ ಚರಿತ್ರೆಗಳು:-

ಮಕ್ಕಳಿಗಾಗಿ ಕೇವಲ ಎರಡು ನಾಟಕಗಳನ್ನು ಬರೆದಿದ್ದಾರೆ. ಅವುಗಳನ್ನು ಈ ಕೆಳಗಿನಂತಿವೆ.

1) ಬೆಳೆಯುವ ಪಯಿರು :-

2) ಧ್ವಜವಂದನೆ :-

1) **ಬೆಳೆಯುವ ಪಯಿರು:-** ಈ ನಾಟಕವು ಎರಡು ದೃಶ್ಯಗಳಿಂದ ಕೂಡಿದೆ. ಇದು 'ಸರ್ವಧರ್ಮ ಸಮನ್ವಯತೆ'ಯನ್ನು ಸಾರುತ್ತದೆ. ಈ ಒಂದು ನಾಟಕ ಗಾಂಧೀಜಿಯವರ ಬಾಲ್ಯದ ಜೀವನವನ್ನು ಒಳಗೊಂಡಿದೆ. ಹಾಗೆಯೇ ಗಾಂಧಿಜಿಯವರು ಬಾಲ್ಯದಲ್ಲಿ ಮಾಡಿದ ತಪ್ಪುಗಳನ್ನು ಯಾವ ರೀತಿಯಾಗಿ ತಿದ್ದಿಕೊಳ್ಳುತ್ತಾರೆ.! ಎಂಬುವುದೇ ಈ ನಾಟಕದ ತಿರುಳಾಗಿದೆ.

ತಪ್ಪುಗಳನ್ನು ಮಾಡುವುದು ತುಂಬಾ ಸರಳ ಆದರ ಅದೇ ತಪ್ಪುಗಳನ್ನು ಒಪ್ಪಿಕೊಳ್ಳಲು ಮನಸ್ಸು ಎಷ್ಟೊಂದು ಹೊಯದಾಡುತ್ತದೆ. ಎಂಬುದಕ್ಕೆ ಗಾಂಧೀಜಿಯವರು ಅವರ ತಂದೆಯವರಿಗೆ ಬರೆದ ಪತ್ರವೇ ಸಾಕ್ಷಿಯಾಗಿದೆ.

1) ಶಾಲೆಯಲ್ಲಿ ಕಾಫಿ ಮಾಡದ ಕತೆ.
2) ಗಾಂಧಿ ಕಲಿತ ಪಾಠ ಶಾಲೆ
3) ಗಾಂಧೀ ಕಂಡ ಸತ್ಯದ ದಾರಿ
4) ಗಾಂಧೀಜಿಯವರ ಕೈಬರಹ
5) ಕಟ್ಟಿಕೊಂಡ ಕೆಟ್ಟ ಸಹವಾಸ
6) ಮೌಂಸದ ಹಿಂದೆ ಬೀಡಿ ಕಳ್ಳತನ
7) ಕೆಟ್ಟ ಸಹವಾಸ ಬಿಟ್ಟಿದು
8) ಅಹಿಂಸೆಯ ಮೊದಲನೆಯ ಪಾಠ
9) ಗಾಂಧೀಜಿಯವರ ಜೀವನದ ಅಡಿಪಾಯ

ಇವೆಲ್ಲವುಗಳು ಈ ನಾಟಕದಲ್ಲಿ ಒಳಗೊಂಡಿವೆ. ಭಾರತಕ್ಕೆ ಒಬ್ಬ ಆದರ್ಶ ವ್ಯಕ್ತಿಯಾದ ಗಾಂಧೀಜಿಯವರ ಬಾಲ್ಯದ ದಿನಗಳನ್ನು ತಿಳಿಸಿ ಕೊಡುವುದರ ಜೊತೆಗೆ ಅವರ ಔಧಾರ್ಯ ಧೈರ್ಯ ಅಹಿಂಸೆಯ ಮಾರ್ಗವನ್ನು ಮಕ್ಕಳಲ್ಲಿ ಬಿತ್ತಿದ್ದಾರೆ.

2) **ಧ್ವಜವಂದನೆ** : ಈ ಒಂದು ಸಣ್ಣ ನಾಟಕವು ಮಕ್ಕಳಲ್ಲಿ ರಾಷ್ಟ್ರಾಭಿಮಾನ ಮತ್ತು ರಾಷ್ಟ್ರಭಕ್ತಿಯನ್ನು ಮೂಡಿಸುತ್ತದೆ. ಈ ಒಂದು ನಾಟಕದಲ್ಲಿ ಮಕ್ಕಳು ನಮ್ಮ ಬಾವುಟದ ಪಾವಿತ್ರ್ಯತೆ ಬಣ್ಣಗಳು ಚರಕ ಚಕ್ರ, ಇವುಗಳ ಸಂಕೇತಗಳನ್ನು ಮಕ್ಕಳಿಗೆ ಮನಮುಟ್ಟುವಂತೆ ಬರೆದಿದ್ದಾರೆ ಈ ನಾಟಕದಲ್ಲಿ ಮಕ್ಕಳಿಗೆ 8 ಅಂಶಗಳುನ್ನು ವಿವರಿಸಿ ಹೇಳಿದ್ದಾರೆ. ಅವುಗಳು ಈ ಕೆಳಗಿನಂತಿವೆ.

1) ಬಾವುಟ ಎಂಬುದು ಏನು?

2) ಅಶೋಕ ಚಕ್ರ

3) ನಮ್ಮ ಬಾವುಟದ ವರ್ಣನೆ

4) ನಮ್ಮ ಬಾವುಟದ ಬಣ್ಣಗಳು

5) ಅಖಂಡವಾದ ಚಕ್ರ

6) ಬಾವುಟವನ್ನು ಗೌರವಿಸುವ ಬಗೆ

7) ನಮ್ಮ ರಾಷ್ಟ್ರಗೀತೆಗಳ ಅರ್ಥ

8) ನಮ್ಮ ರಾಷ್ಟ್ರಗೀತೆಗಳ ಮೂಲ -ಇವೆಲ್ಲಾ ಅಂಶವನ್ನು ಮಕ್ಕಳಿಗೆ ಒಂದೊಂದಾಗಿ ವಿವರಿಸಿ ಮಕ್ಕಳಲ್ಲಿ ಬಾಲ್ಯದಲ್ಲಿಯೇ ರಾಷ್ಟ್ರಾಭಿಮಾನದ ಭೀಜವನ್ನು ಬೀತ್ತಿದ್ದಾರೆ.

ಒಟ್ಟಾರೆಯಾಗಿ ಮಕ್ಕಳಿಗಾಗಿ ರಾಜರತ್ನಂ ಅವರು ಕೇವಲ 2 ನಾಟಕಗಳನ್ನು ಬರೆದಿದ್ದರೂ ಅವುಗಳ ಮಹತ್ವ ದೊಡ್ಡದ್ದು.ಏಕೆಂದರೆ ಬಾಲ್ಯದಲ್ಲಿಯೇ ನಾವು ಮಕ್ಕಳಿಗೆ ಯಾವ ಸಂಸ್ಕಾರವನ್ನು ಕಲಿಸುತ್ತೇಯೋ ! ಅದನ್ನು ಮಕ್ಕಳು ಕಲಿಯುತ್ತಾರೆ. ಎಂಬುದಕ್ಕೆ ಈ ನಾಟಕಗಳು ಸಾಕ್ಷಿಯಾಗಿವೆ.

ಹಾಗೆಯೇ ರಾಜರತ್ನಂ ಅವರು ಮಕ್ಕಳಿಗಾಗಿ ಮಹಾನ್ ಪುರುಷರ ಜೀವನ ಚರಿತ್ರೆಗಳನ್ನು ಬರೆದಿದ್ದಾರೆ.

1) ಯೇಸುಕ್ರಿಸ್ತ 2) ಶ್ರೀರಾಮ 3) ಹರ್ಷವರ್ಧನ 4) ಅಶೋಕ ಚಕ್ರವರ್ತಿ

5) ಮಹಾತ್ಮಗಾಂಧೀಜಿ 6) ಗೌತಮಬುದ್ಧ 7) ಅಲ್ಲಮಪ್ರಭು

ಹೀಗೆ 7 ಜನರ ಜೀವನ ಚರಿತ್ರೆಯನ್ನು ಬರೆದಿದ್ದಾರೆ. ಈ ಜೀವನ ಚರಿತ್ರೆಗಳು ಮಕ್ಕಳಿಗೆ ಅವಶ್ಯಕವೆನಿಸಿವೆ. ಏಕೆಂದರೆ ಅವರ ಆದರ್ಶಗಳು, ತತ್ವಗಳು, ಅವರು ನಡೆದು ಬಂದ ದಾರಿ, ಅವರ ಶ್ರದ್ಧೆ, ಭಕ್ತಿ, ಪ್ರೀತಿ, ಕರುಣೆ,ಸೇವೆ, ತ್ಯಾಗ, ಸಮಾನತೆ, ಮಾನವೀಯ ಮೌಲ್ಯಗಳು, ಎಳೆಯ ಮಕ್ಕಳ ಮನಸನ್ನು ಹಸನಗೊಳಿಸುತ್ತವೆ. ದೊಡ್ಡವರ ದಾರಿಯನ್ನು ಅನುಸರಿಸಿ ನಡೆದು ಚೆನ್ನಾಗಿ ಬದುಕಿದವರು ಎಷ್ಟೋ ಜನ ಇದ್ದಾರೆ. ಈ ದಿಸೆಯಲ್ಲಿ ಮಕ್ಕಳಿಗಾಗಿ ಮಹಾನ್ ಪುರುಷರ ಜೀವನ ಚರಿತ್ರೆಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗುವುದು.

ಸಮಾರೋಪ:-

ರಾಜರತ್ನಂ ಅವರು ಮಕ್ಕಳ ಸಾಹಿತ್ಯವನ್ನು ತನು-ಮನ-ಧನಗಳಿಂದ ಪ್ರೋತ್ಸಾಹ ನೀಡಿ ಅದರ ಬೆಳವಣಿಗೆಗೆ ಶ್ರಮಿಸಿದ್ದಾರೆ. ಹಾಗೆಯೇ ಮಕ್ಕಳಲ್ಲಿ ನೈತಿಕ ಮೌಲ್ಯ ಮತ್ತು ಮಾನವೀಯತೆಯು ಸಂಚಲನವಾಗಬೇಕಾದರೆ ರಾಜರತ್ನಂ ಅವರಂತಹ ಸಾಹಿತಿಗಳ ಚಿಂತನೆಗಳು ಅವಶ್ಯಕವೆನಿಸುತ್ತದೆ.

ಮಕ್ಕಳ ಸಾಹಿತ್ಯಕ್ಕೆ ಅವರು ಬಳಸಿಕೊಂಡಿರುವ ಭಾಷೆ, ಮತ್ತು ಆರಿಸಿಕೊಂಡಿರುವ ವಸ್ತು ವಿಷಯಗಳ ವ್ಯಾಪ್ತಿ ವಿಶೇಷವಾದದ್ದು. ರಾಜರತ್ನಂ ಅವರು ಪದ್ಯ,ನಾಟಕ,ಕತೆ, ಜೀವನ ಚರಿತ್ರೆಗಳು ಧಾರ್ಮಿಕ ಸಾಹಿತ್ಯ ಮೊದಲಾದ ಎಲ್ಲ ಪ್ರಕಾರಗಳಲ್ಲೂ ಕೃಷಿ ಮಾಡಿದ್ದಾರೆ.ಅಲ್ಲದೆ,

ಸಾಹಿತ್ಯ ಪರಿಚಾರಕರಾಗಿಯೂ ನಿಸ್ವಾರ್ಥ ಸೇವೆ ಸಲ್ಲಿಸಿದ್ದಾರೆ, ಆದ್ದರಿಂದಲೇ ಕನ್ನಡ ಪುಸ್ತಕ ಪ್ರಾಧಿಕಾರವು ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಮಹನೀಯರಿಗೆ ಪ್ರಧಾನ ಮಾಡಲು 'ಜಿ.ಪಿ.ರಾಜರತ್ನಂ ಸಾಹಿತ್ಯ ಪರಿಚಾರಕ ಪ್ರಶಸ್ತಿ'ಯನ್ನು ಸ್ಥಾಪಿಸಿದೆ. ಹಾಗಾಗಿ ಇವರ ಸಾಹಿತ್ಯದ ಅಧ್ಯಯನವು ಮಾನವ ಕುಲಕ್ಕೆ ಮತ್ತು ಮಕ್ಕಳಿಗೆ ಉಪಯುಕ್ತವಾದುದಾಗಿದೆ.

ಮಾರ್ಗದರ್ಶಕರು	**ಸಂಶೋಧನ ವಿದ್ಯಾರ್ಥಿನಿ**
ಡಾ॥ಮಹೇಶ ಚಿಂತಾಮಣಿ	**ರಮಜಾನಬಿ ತಹಶೀಲ್ದಾರ**